

# ಪ್ರಾಚೀನ ಗ್ರಂಥಗಳ ಆರೈಕೆ

**ನಾಡಿನಲ್ಲಿ ಹಲವೆಡೆ ಸಂರಕ್ಷಣೆ ಇಲ್ಲದೆ ಉಳಿದಿರುವ ಅಮೂಲ್ಯ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಸಂಪಾದನೆ ಕಾರ್ಯಗಳನ್ನು ಧರ್ಮಸ್ಥಳದ ಈ ಸಂಸ್ಥೆ ಮಾಡಿಕೊಂಡು ಬಂದಿದೆ. ನಿಮ್ಮಲ್ಲಿ ಜೀರ್ಣಾವಸ್ಥೆಯಲ್ಲಿರುವ ಹಳೆಯ ಗ್ರಂಥಗಳಿದ್ದರೆ ಅವುಗಳನ್ನು ಉಚಿತವಾಗಿ ಶುದ್ಧೀಕರಿಸಿ, ಹೆಚ್ಚಿನ ಬಾಳಿಕೆಗೆ ಅನುಕೂಲ ಮಾಡುವ ಯೋಜನೆಯೂ ಇಲ್ಲಿ ಜಾರಿಯಲ್ಲಿದೆ.**

■ ಚಿತ್ರ– ಲೇಖನ: **ಎಸ್.ಆರ್. ವಿಘ್ನರಾಜ**



ಪ್ರಪಂಚದ ಎಲ್ಲೆಡೆ ಅಮೂಲ್ಯವಾದ ಜ್ಞಾನ ಮಾಹಿತಿಗಳನ್ನು ಮರದ ತೊಗಟೆ, ತಾಡವೋಲೆ, ಕಾಗದ, ಬಟ್ಟೆ, ಲೋಹದ ಫಲಕ, ದಂತ, ಶಿಲೆ ಮೊದಲಾದ ಸಾಮಗ್ರಿಗಳ ಮೇಲೆ ಬರೆದು ಸಂಗ್ರಹಿಸಲಾಗಿದೆ. ವಿಶ್ವವಿದ್ಯಾನಿಲಯ, ಮ್ಯೂಸಿಯಂ ಮತ್ತಿತರ ನೆಲೆಗಳಲ್ಲಿ ಇಂತಹ ಜ್ಞಾನ ಸಂಗ್ರಹ ನಡೆಯುತ್ತಲೇ ಇದೆ.

ನಮ್ಮ ಹಿರಿಯರು ಸಾವಿರಾರು ವರುಷಗಳಿಂದ ಕಂಡುಕೊಂಡ ಅನುಭವಗಳನ್ನು ಪುರಾಣ, ವ್ಯಾಕರಣ, ಕೋಶ, ಕಾವ್ಯ, ಗಣಿತ, ಜ್ಯೋತಿಷ, ಆಯುರ್ವೇದ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಾಕಶಾಸ್ತ್ರ, ಕೂಪಶಾಸ್ತ್ರ, ಕೋಕಶಾಸ್ತ್ರ ಮೊದಲಾದ ಹೆಸರುಗಳಲ್ಲಿ ತಾಳೆಗರಿ ಮತ್ತು ಕಾಗದದ ಹಸ್ತಪ್ರತಿಗಳಲ್ಲಿ ಬರೆದಿಟ್ಟರು. ಅವು ನಮ್ಮ ಜ್ಞಾನಸಂಪತ್ತು. ಅವುಗಳ ರಕ್ಷಣೆ ಒಂದು ಜವಾಬ್ದಾರಿಯೂ ಹೌದು.

ಹಸ್ತಪ್ರತಿಗಳನ್ನು ಉಪೇಕ್ಷಿಸಬಾರದು. ಪಂಪನ ಆದಿಕಾವ್ಯ ಅಚ್ಚಾಗಿರುವುದು ಹಳೆಯ ತಾಳೆಗರಿ ಹಸ್ತಪ್ರತಿಗಳ ಅಧ್ಯಯನದಿಂದ. ಮೊದಲ ಅಚ್ಚಿನ (ಮುದ್ರಣ) ಪಂಪನ ಕಾವ್ಯದ ಪ್ರತಿಗಳು ನಮಗೆ ಲಭ್ಯವಿಲ್ಲ. ಅವುಗಳ ಮರು ಮುದ್ರಣಕ್ಕೆ ಗ್ರಂಥಗಳ ಅಗತ್ಯವಿದೆ. ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ರಕ್ಷಿಸಿದರೆ ಸಾವಿರ ವರುಷ ಬಾಳ್ವಿಕೆ ಬರುತ್ತವೆ.

ಧರ್ಮಸ್ಥಳದ ಪ್ರಾಚ್ಯ ವಿದ್ಯಾ ಸಂಸ್ಥೆ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನವು ದೇಶದ ಅಕ್ಷರ ಲಿಪಿ ಸಂಸ್ಕೃತಿಯನ್ನು ರಕ್ಷಿಸಲು ತನ್ನ